ನನ್ನ ಜೊತೆಯಲ್ಲಿ ಮಾತನಾಡಿ ಆ ವಿಷಯದ ಬಗ್ಗೆ ಸೂಕ್ಷ್ಮವಾಗಿ ವಿವರಿಸಿ ನನಗೆ ಹೇಳುತ್ತಾರೆ.

ಆದರೆ ಏಕಾಏಕಿ ಬಂದು ಆಂಧ್ರದಲ್ಲಿ ಹೀಗೆ ನಡೆಯಿತು, ನಾವು ಅದಕ್ಕೆ ಸ್ಪಂದಿಸಬೇಕು ಎಂದು ಹೇಳಿದರೆ ಹೇಗೆ? ಆ ವಿಚಾರದ ಬಗ್ಗೆ ಎರಡು ಅಭಿಪ್ರಾಯ ಇಲ್ಲವೇ ಇಲ್ಲ, ದಲಿತರ ಮೇಲೆ ಎಲ್ಲೇ ಅನ್ಯಾಯ ನಡೆದರೂ ಅದನ್ನು ಖಂಡಿಸಬೇಕು. ಇದರ ಬಗ್ಗೆ ಈ ಸಭೆ ಒಟ್ಟಿಗಿದೆ ಮತ್ತು ಇದರ ಬಗ್ಗೆ ಎರಡು ಅಭಿಪ್ರಾಯ ಇಲ್ಲ, ಆದೂ ಅಲ್ಲದೆ ಇದು ಆಂಧ್ರಪ್ರದೇಶದಲ್ಲಿ ನಡೆದಿರತಕ್ಕಂಥ ಎಚಾರ. ಇದು ನಮ್ಮ .ರಾಜ್ಯದಲ್ಲಿ ನಡೆಯದೇ ಇರಲಿ ಎಂದು ಆಸೆ ಮಾಡಿ ಸುಮ್ಮನಿರೋಣ.

ಒಬ್ಬರು ಮಾನ್ಯ ಸದಸ್ಯರು : ಗೃಹ ಮಂತ್ರಿಗಳು ಏನು ಹೇಳುತ್ತಾರೆ.

ಅಧ್ಯಕ್ಷರು : ಆಂಧ್ರಪ್ರದೇಶದಲ್ಲಿ ಘಟನೆ ನಡೆದಿರುವುದಕ್ಕೆ ನಮ್ಮ ಗೃಹಮಂತ್ರಿಗಳು ಏನು ಮಾಡುತ್ತಾರೆ?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಸರ್ಕಾರ ಇದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳಬಹುದು.

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಮಂತ್ರಿಗಳು): ಮಾನ್ಯ ವಿರೋಧ ಪಕ್ಷದ ಉಪನಾಯಕರಾದ ಶ್ರೀ ಸಿಂಧ್ಯರವರು , ದೇಶಪಾಂಡೆಯವರು ಮತ್ತು ಶ್ರೀ ವಾಟಾಳ್ ನಾಗರಾಜ್‌ರವರು ಏನು ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ, ಈಗಾಗಲೇ ದಲಿತ ಸಂಘರ್ಷ ಸಮಿತಿಯ ನಾನಾ ಘಟಕಗಳ ಅಧ್ಯಕ್ಷರು ಮತ್ತು ಸದಸ್ಯರ ಜೊತೆಯಲ್ಲಿ ನಾನು ಮಾತನಾಡಿದ್ದೇನೆ. ಆಂಧ್ರ ಪ್ರದೇಶದಲ್ಲಿ ಏನು ಆಗಿದೆ, ಅದರ ಬಗ್ಗೆ ಗಂಭೀರವಾದ ತಮ್ಮ ಅಭಿಪ್ರಾಯಗಳನ್ನು ಅವರು ವ್ಯಕ್ತಪಡಿಸಿದ್ದಾರೆ. ಸರ್ಕಾರಕ್ಕೆ ಕೂಡ ಹೇಳಿದ್ದಾರೆ ಈಗಾಗಲೇ ತಾವು ಹೇಳಿದ ಹಾಗೆ, ಇದು ಆಂಧ್ರದಲ್ಲಿ ನಡೆದಿರುವಂಥ ಘಟನೆ. ಇದರ ಬಗ್ಗೆ ಪ್ರಧಾನ ಮಂತ್ರಿಗಳು ಕೂಡ ಹೇಳಿದ್ದಾರೆ. ಸಂಬಂಧಪಟ್ಟ ಮುಖ್ಯ ಮಂತ್ರಿಗಳ ಸಭೆಯನ್ನು ಕೂಡ ಶೀಘ್ರದಲ್ಲೇ ಕರೆಯುತ್ತಿದ್ದೇವೆ ಎಂದು ಅವರು ಹೇಳಿದ್ದಾರೆ. ಇದು ರಾಷ್ಟ್ರಮಟ್ಟದಲ್ಲಿ ಚರ್ಚೆಯಾಗಿ ನಿರ್ಧಾರ ತೆಗೆದುಕೊಳ್ಳುವಂಥಾದ್ದು. ಮತ್ತು ಇಲ್ಲಿ ಇರುವ ದಲಿತ ಸಂಘರ್ಷ ಸಮಿತಿಯವರು ಏನು ಚಳುವಳಿ ಮಾಡುವುದಕ್ಕೆ ಹೊರಟಿದ್ದಾರೆ, ಅವರನ್ನು ಕೂಡ ಕರೆಸಿ ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು .....

iv) ವಿಷಯ : ಶೇಂಗಾ ಮೇಲೆ 15 ಪರ್ಸೆಂಟ್ ಟ್ಯಾಕ್ಸ್ ಹೆಚ್ಚು ಮಾಡಿರುವುದರಿಂದ ಉತ್ತರ ಕರ್ನಾಟಕದಲ್ಲಿ ಆಯಿಲ್ ಮಿಲ್‌ಗಳು ಬಂದ್ ಆಗಿರುವುದು.

ಶ್ರೀ ಎಸ್.ಎಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟಕದಲ್ಲಿ ಆಯಿಲ್ ಮಿಲ್‌ಗಳು ಬಂದ್ ಆಗಿವೆ. ಶೇಂಗಾ ಮೇಲೆ 17 ಪರ್ಸೆಂಟ್ ಟ್ಯಾಕ್ಸ್ ಹೆಚ್ಚಿಗೆ ಕೇಳುತ್ತಿದ್ದಾರೆ.....

ಅಧ್ಯಕ್ಷರು : ಅದನ್ನು ಕಡಿಮೆ ಮಾಡಿಸೋಣ ಬಿಡಿ.

ಶ್ರೀ ಎಸ್.ಎಚ್. ಕೌಜಲಗಿ : ಇದರ ಪರಿಣಾಮವಾಗಿ 60ರಿಂದ 70ರವರೆಗೆ...

ಅಧ್ಯಕ್ಷರು : ಅವಿಶ್ವಾಸ ನಿರ್ಣಯ ಬರುತ್ತದೆ, ಕುಳಿತುಕೊಳ್ಳಿ.

ಶ್ರೀ ಎಸ್.ಎಚ್. ಕೌಜಲಗಿ : ಇದು ಬಹಳ ಮುಖ್ಯವಾದದ್ದು.....

ಅಧ್ಯಕ್ಷರು : ಅವಿಶ್ವಾಸ ನಿರ್ಣಯಕ್ಕಿಂತ ಮುಖ್ಯವಾದದ್ದೇ ನೀವು ಹೇಳುತ್ತಿರುವುದು?

ಶ್ರೀ ಎಚ್.ಎಸ್. ಕೌಜಲಗಿ : ಹೌದು ಸರ್. ಫ್ಯಾಕ್ಟರಿಗಳು ಬಂದ್ ಆಗಿವೆ...

ಶ್ರೀ ಆರ್.ವಿ. ದೇಶಪಾಂಡೆ : ಹಬ್ಬ ಬಂದಿದೆ, ಮನೆಯಲ್ಲಿ ಎಣ್ಣೆ ಇಲ್ಲ....

ಶ್ರೀ ಎಸ್.ಎಚ್. ಕೌಜಲಗಿ : ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿದೆ....

(ಗೊಂದಲ)

MR. SPEAKER : I think priorities ಬಗ್ಗೆ you have a right perspective (referring to Sri Deshpande)

ಶ್ರೀ ಎಸ್.ಎಚ್. ಕೌಜಲಗಿ : ಎಣ್ಣೆ ಬಗ್ಗೆ ಸರ್ಕಾರ ಯಾವಾಗಲೂ ಸರಿಯಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ಡಿಸ್ಟ್ರಿಬ್ಯೂಷನ್ ಬಗ್ಗೆ ಒಂದು ವ್ಯವಸ್ಥೆ ಬೇಕು.

(ಗೊಂದಲ)

ಅಧ್ಯಕ್ಷರು : ಈಗ ಅವಿಶ್ವಾಸ ನಿರ್ಣಯ, ವಿರೋಧ ಪಕ್ಷದ ನಾಯಕರು.

ಅಧ್ಯಕ್ಷರ ಆದೇಶದ ಮೇರೆಗೆ ತೆಗೆದುಹಾಕಲಾಗಿದೆ.

ಅಧ್ಯಕ್ಷರ ಆದೇಶದ ಮೇರೆಗ ತೆಗೆದುಹಾಕಲಾಗಿದೆ.

10.45 ಎ.ಎಂ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಸಭಾಧ್ಯಕ್ಷರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ವಿನಂತಿ ವಿಚಿತ್ರವಾಗಿ ಕಾಣಬಹುದು.

ಅಧ್ಯಕ್ಷರು : ಈಗಾಗಲೇ ಒಂದು ಎದುರಿಸಿದೆ.

ಪ್ರೊ. ಎಂ.ಡಿ ನಂಜುಂಡಸ್ವಾಮಿ : ಆ ವಿಚಿತ್ರದ ಬಗ್ಗೆಯೇ ಮಾತನಾಡುತ್ತಿದ್ದೇನೆ. ಈಗ ನಡೆಯಿತಲ್ಲ, ತಿರುವಳ್ಳವರ್ ಬಗ್ಗೆ ಅದು ಏನೇನು ನಡೆಯಿತು ಅದನ್ನು ದಯವಿಟ್ಟು ಕಡತದಿಂದ ಆಚೆ ತೆಗೆಸಿ, ಇಲ್ಲದಿದ್ದರೆ ನಾವು ತಿರುವಳ್ಳುವರ್‌ಗೆ ಅವಮಾನ ಮಾಡಿದ ಹಾಗೆ ಆಗುತ್ತದೆ.

MR.SPEAKER : I entirely agree with Prof. Nanjunda Swamy's submission and I am very happy that you have made that submission. ಅದೆಲ್ಲಾ That does not become part of the proceedings of this House.

ಈಗ ಅವಿಶ್ವಾಸ ಗೊತ್ತುವಳಿ. ಮಾನ್ಯ ವಿರೋಧ ಪಕ್ಷದ ನಾಯಕರು.

ಶ್ರೀ ಎಸ್. ಬಂಗಾರಪ್ಪನವರ ನೇತೃತ್ವದ ಮಂತ್ರಿ ಮಂಡಲದ ಮೇಲೆ ಅವಿಶ್ವಾಸ ನಿರ್ಣಯ ಮತ್ತು ಚರ್ಚೆ.

+ ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ ಈ ಸದನದಲ್ಲಿ ನಾನು ಶ್ರೀಮಾನ್ ಬಂಗಾರಪ್ಪನವರ ನೇತೃತ್ವದ ಮಂತ್ರಿಮಂಡಲದಲ್ಲಿ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೇಳಿದೆ. ತಾವು ಕೂಡ ಅನುಮತಿಯನ್ನು ಕರುಣಿಸಿದ್ದೀರಿ. ಅದಕ್ಕಾಗಿ ಮೊದಲು ನಾನು ತಮಗೆ ನನ್ನ ವಂದನೆಯನ್ನು ಸಮರ್ಪಣೆ ಮಾಡುತ್ತಾ.....

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ ಈ ಸರಕಾರದ ಮೇಲೆ ನಾವು ಅವಿಶ್ವಾಸ ನಿರ್ಣಯವನ್ನು ತೆಗೆದುಕೊಂಡು ಬಂದಿದ್ದೇವೆ. ಅವಿಶ್ವಾಸ ನಿರ್ಣಯ ಪಾಸಾಗಿ ಹೋಗಿಬಿಡುತ್ತದೆ, ಈ ಸರಕಾರ ನಾಡಿದ್ದು ಹೋಗಿಬಿಡುತ್ತದೆ ಎಂಬ ಭಾವನೆ ನಮಗೆ ಇಲ್ಲ. ಕೆಲವು ವಿಚಾರಗಳನ್ನು ಈ ಸದನದ ನಿಯಮಗಳ ಒಳಗಡೆ